# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್:08232236255

ಇಮೇಲ್:aeemdr2@rediffmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರಕಛೇರಿ,
ಗ್ರಾಮಾಂತರ ಉಪ ವಿಭಾಗ, ಮದ್ದೂರು

ಕ್ರಮಾಂಕ:ಸಕಾನಿಇಂ.(ವಿ)/ಹಿಸ/ಗ್ರಾ.ಉವಿ/ಮದ್ದೂರು/ 1192-98 ದಿನಾಂಕ: 03 AUG 2018

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 30.07.2018 ರಂದು ಜರುಗಿದ ಗ್ರಾಮಾಂತರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸಮೂರ್ತಿ | ಅಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾನಿಇಂ(ವಿ) | ವಿಭಾಗೀಯ ಕಛೇರಿ, ಮದ್ದೂರು |
| 3 | ಶ್ರೀ ಜಿ.ಯು.ಮಂಜುನಾಥ್ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 4 | ಶ್ರೀ ಶ್ರೀಕಾಂತ್ ಎಸ್. | ಸಕಾಇಂ(ವಿ) | ಮದ್ದೂರು ಉಪವಿಭಾಗ-2 |
| 5 | ಶ್ರೀ ನಾಗರಾಜ್ | ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 7 | ಶ್ರೀ ಮೋಹನ್‌ರಾಜ್ | ಸಇಂ(ತಾಂ) | ಗ್ರಾಮಾಂತರ ಉಪವಿಭಾಗ |
| 8 | ಶ್ರೀ ಸಂತೋಷ್ ಎಂ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 9 | ಶ್ರೀ ನಾಗೇಶ್ | ಕಿಇಂ(ವಿ) | ಕೊಪ್ಪ ಶಾಖೆ |
| 10 | ಶ್ರೀ ಶಿವರಾಜು | ಕಿಇಂ(ವಿ) | ಕೆಸ್ತೂರು ಶಾಖೆ |
| 11 | ಶ್ರೀ ತೇಜ್‌ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 12 | ಶ್ರೀ ರಾಜೇಶ್ | ಕಿಇಂ(ವಿ) | ಕೆ.ಎಂ.ದೊಡ್ಡಿ ಶಾಖೆ |
| 13 | ಶ್ರೀ ರಾಮಚಂದ್ರ | ಕಿಇಂ(ವಿ) | ಸೋಮನಹಳ್ಳಿ ಶಾಖೆ |
| 14 | ಶ್ರೀ ಮಹೇಶ್ | ಹಿರಿಯ ಸಹಾಯಕ | ಉಪವಿಭಾಗ-1 |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು, ನೌಕರರು, ಪತ್ರಿಕಾ ಮಾಧ್ಯಮದವರನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮದ್ದೂರು ಉಪವಿಭಾಗ-1 ರವರು ಸ್ವಾಗತಿಸಿದರು.

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು ಹಿಂದಿನ ಸಭೆಯ ಸಭಾ ನಡಾವಳಿಯಲ್ಲಿ ದಾಖಲಾಗಿದ್ದ ಗ್ರಾಹಕರ ದೂರುಗಳನ್ನು ಗ್ರಾಹಕರ ಸಮ್ಮುಖದಲ್ಲಿ ಓದಿ, ಅವುಗಳನ್ನು ನಿವಾರಿಸಲು ತೆಗೆದುಕೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ಸೇರಿದ್ದ ಗ್ರಾಹಕರಿಗೆ ವಿವರಿಸಿ ತಿಳಿಸಲಾಯಿತು. ನಂತರ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರ ಅನುಮತಿ ಮೇರೆಗೆ ಸಭೆಯನ್ನು ಮುಂದುವರಿಸಲಾಯಿತು.

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| ಗ್ರಾಹಕರು -ಶ್ರೀ ಸಿದ್ದೇಗೌಡ, (ಕೆ.ಮಲ್ಲೀಗೆರೆ)ಕೌಡ್ಲೆ ಗ್ರಾಮ 8095179849 | | |
| 1 | ಕಳೆದ 6 ತಿಂಗಳ ಹಿಂದೆ ನಮ್ಮ ಗ್ರಾಮದ ಐಪಿ ಲಿಮಿಟ್‌ಗೆ 25 ಕೆವಿಎ ಹೆಚ್ಚುವರಿ ಪರಿವರ್ತಕ ಮಂಜೂರು ಮಾಡಲು ಅಂದಾಜು ಪಟ್ಟಿ ಸಲ್ಲಿಸಲಾಯಿತು. ಇದುವರೆವಿಗೂ ಮಂಜೂರಾತಿ ದೊರಕಿಲ್ಲ. ದಯಮಾಡಿ ಮಂಜೂರಾತಿ ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರನ್ನು ಕೇಳಲಾಗಿ ಸದರಿ ಗ್ರಾಮದ ಹೆಚ್ಚುವರಿ ಪರಿವರ್ತಕ ಮಂಜೂರು ಮಾಡುವ ಕಡತವನ್ನು ಟಿಎಕ್ಯುಸಿ ತಪಾಸಣೆಗೆ ಕಳುಹಿಸಲಾಗಿದೆ. ಅದು ದೊರೆತ ತಕ್ಷಣವೇ ಪರಿವರ್ತಕ ಮಂಜೂರು ಮಾಡುವುದಾಗಿ ತಿಳಿಸಿದರು. |
| ಗ್ರಾಹಕರು- ಶ್ರೀ ಅಪ್ಪಾಜಿಗೌಡ-9739253987, ಶ್ರೀ ಸ್ವಾಮಿ-9739253634 ರಾಜೇಗೌಡನದೊಡ್ಡಿ ಗ್ರಾಮ | | |
| 2 | ಸದರಿ ಗ್ರಾಹಕರು ಕೆ.ಹೊನ್ನಲಗೆರೆ ಶಾಖೆಯ ಮಾರ್ಗದಾಳು (ಲೈನ್‌ಮನ್) ಮಲ್ಲೇಶ್, ರವರ ಉದ್ದಟತನ ಕುರಿತು ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮುಖಾಂತರ ಸದರಿ ನೌಕರನಿಗೆ ನೋಟೀಸ್‌ನೀಡಿ ಮುಂದಿನ ಕ್ರಮ ಕೈಗೊಳ್ಳಲು ತಿಳಿಸಿದರು. ಮುಂದುವರೆದು ಗ್ರಾಹಕರು ಸದರಿ ನೌಕರನನ್ನು ಈ ಕೂಡಲೇ ಸಭೆಗೆ ಕರೆಸಿ ವಿಚಾರಣೆ ನಡೆಸುವಂತೆಯೂ ಸಹ ಸಭೆಯಲ್ಲಿ ಒತ್ತಾಯಿಸಿದರು. ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| ಗ್ರಾಹಕರು- ಶ್ರೀ ಬಸವಯ್ಯ, ನೀಲಕಂಠನಹಳ್ಳಿ ಗ್ರಾಮ 8694034752 | | |
| 3 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿದರು. |

| | | |
|---|---|---|
| | **ಗ್ರಾಹಕರು- ಶ್ರೀ ರಾಮಕೃಷ್ಣ, ಹನುಮಂತಪುರ ಗ್ರಾಮ** | |
| 4 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿದರು. |
| | **ಗ್ರಾಹಕರು- ಶ್ರೀ ಗುರುಪ್ರಸಾದ್ -9900989268, ಸ್ವಾಮಿ-9902061198 ತೈಲೂರು ಗ್ರಾಮ** | |
| 5 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿದರು. |
| | **ಗ್ರಾಹಕರು- ಶ್ರೀ ಕುಮಾರಸ್ವಾಮಿ ಎಂ.ಎಸ್. ಮುದಗೆರೆ ಗ್ರಾಮ 72598154114** | |
| 6 | ಸ್ವಯಂ ನಿರ್ವಹಣಾ ಯೋಜನೆಯಡಿ ನಮ್ಮ ಕೋಳಿ ಫಾರಂಗೆ **(MRP-194)**ವಿದ್ಯುತ್ ಲೈನ್ ಎನ್‌ಜೆವೈ ಲೈನ್‌ನಿಂದ ತೆಗೆದುಕೊಳ್ಳಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲಾಗಿದೆ. ಕೆಲಸಮಾಡಿಸಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರುರವರನ್ನು ಕೇಳಲಾಗಿ ಸದರಿ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಾರ್ಗದ ಮಧ್ಯೆ ಇರುವ ಗ್ರಾಹಕರು ತಕರಾರು ಒಂಡುತ್ತಿದ್ದಾರೆ. ಹೀಗಾಗಿ ಕೆಲಸ ವಿಳಂಬವಾಗಿದೆ ಎಂದು ತಿಳಿಸಿದರು. ಮುಂದುವರೆದು ಬೆಸಗರಹಳ್ಳಿ ಶಾಖಾಧಿಕಾರಿ ಶ್ರೀ ಸಂತೋಷ್‌ಗೆ ಅಂದಾಜು ಪಟ್ಟಿಯನ್ನು ಮರು ತಯಾರಿಸಿ ತಕರಾರು ಮಾಡುತ್ತಿರುವ ಗ್ರಾಹಕರ ವಿರುದ್ಧ ಪೋಲೀಸ್ ಠಾಣೆಗೆ ದೂರು ನೀಡಲು ತಿಳಿಸಿದರು. |
| | **ಗ್ರಾಹಕರು- ಶ್ರೀ ಶಿವಕುಮಾರ್, ಹುನುಗನಹಳ್ಳಿ ಗ್ರಾಮ 9902118467** | |
| 7 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ವಿಭಾಗೀಯ ಕಛೇರಿಯವರು ಈಗಾಗಲೇ ಕೆಲಸ ಆಗಿ ಹೋಗಿದೆ. ಸದರಿ ಅಂದಾಜು ಪಟ್ಟಿಗೆ ಮಂಜೂರಾತಿ ಕೊಡಲು ಆಗುವುದಿಲ್ಲ ಎನ್ನುತಾರೆ. ದಯಮಾಡಿ ಸಮಸ್ಯೆ ಬಗೆಹರಿಸಿ ಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರುರವರಿಗೆ ತಿಳಿಸಿ ಸದರಿ ಗ್ರಾಹಕರ ಸ್ಥಳ ಪರಿಶೀಲಿಸಿ, ವಿವರವಾದ ವರದಿಯನ್ನು ಅಂದಾಜು ಪಟ್ಟಿಯಲ್ಲಿ ನಮೂದಿಸಿ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಮರು ಸಲ್ಲಿಸಲು ಸೂಚಿಸಿದರು. |
| | **ಗ್ರಾಹಕರು- ಕೆ.ಬೆಳ್ಳೂರು** | |
| 8 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು. |

<table>
<tr><td colspan="3">ಗ್ರಾಹಕರು- ಶ್ರೀ ಎಚ್.ಎಂ.ಲಿಂಗಯ್ಯ, ಹೆಬ್ಬರಳು ಗ್ರಾಮ 9591258033</td></tr>
<tr><td>9</td><td>ಅಕ್ರಮ-ಸಕ್ರಮ ಯೋಜನೆಯಡಿ 2017ನೇ ಸಾಲಿನಲ್ಲಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು.</td><td>ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರಿಗೆ ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಮನುಕುಮಾರ್, ಕೆ.ಹೊನ್ನಲಗೆರೆ ಗ್ರಾಮ 9964188903</td></tr>
<tr><td>10</td><td>ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು ಗ್ರಾಹಕರು ಭಯ ಪಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಎಚ್.ಎಂ.ಲಿಂಗಯ್ಯ, ಹೆಬ್ಬರಳು ಗ್ರಾಮ 9591258033</td></tr>
<tr><td>11</td><td>ಅಕ್ರಮ-ಸಕ್ರಮ ಯೋಜನೆಯಡಿ 11 ಕೆವಿ ಮತ್ತು ಎಲ್‌ಟಿ ಕೆಲಸ ಪೂರ್ಣಗೊಂಡು 2 ತಿಂಗಳೇ ಕಳೆದಿದೆ. ಪರಿವರ್ತಕ ಕೊಟ್ಟಿಲ್ಲ. ದಯಮಾಡಿ ಪರಿವರ್ತಕ ಕೊಡಿಸಿಕೊಡಿ ಎಂದು ಕೋರಿದರು.</td><td>ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ವಾರದೊಳಗಾಗಿ ಪರಿವರ್ತಕ ಕೊಡಿಸಿಕೊಡುವುದಾಗಿ ಗ್ರಾಹಕರಿಗೆ ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ರಾಜೇಂದ್ರ, ಮಲ್ಲನಕುಪ್ಪೆ ಗ್ರಾಮ 9845269845</td></tr>
<tr><td>12</td><td>ತುರ್ತು ಕಾಮಗಾರಿ ಯೋಜನೆಯಡಿ 11 ಕೆವಿ ಮತ್ತು ಎಲ್‌ಟಿ ಕೆಲಸ ಪೂರ್ಣಗೊಂಡು 5 ತಿಂಗಳೇ ಕಳೆದಿದೆ. ಪರಿವರ್ತಕ ಕೊಟ್ಟಿಲ್ಲ. ದಯಮಾಡಿ ಪರಿವರ್ತಕ ಕೊಡಿಸಿಕೊಡಿ ಎಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ವಾರದೊಳಗಾಗಿ ಪರಿವರ್ತಕ ಕೊಡಿಸಿಕೊಡುವುದಾಗಿ ಗ್ರಾಹಕರಿಗೆ ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಮನು ಬಿ. ನಂಬಿನಾಯಕನಹಳ್ಳಿ ಗ್ರಾಮ 9731719007</td></tr>
<tr><td>13</td><td>ಗ್ರಾಮದ 63 ಕೆವಿಎ ಪರಿವರ್ತಕ ಹೆಚ್ಚುವರಿ ಭಾರ & ಒತ್ತಡದಿಂದ ಕೂಡಿದ್ದು ಸರಿಯಾದ ವಿದ್ಯುತ್ ಸಂಪರ್ಕವಿಲ್ಲ. ದಯಮಾಡಿ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು.</td><td>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರುರವರು ಶಾಖಾಧಿಕಾರಿ ಶ್ರೀ ನಾಗೇಶ್‌ಗೆ ತಿಳಿಸಿ ಸ್ಥಳ ಪರಿಶೀಲಿಸಿ ಸಕ್ರಮ ಗೊಂಡಿರುವ ರೈತರಿಗೆ ಅನುಕೂಲವಾಗುವಂತೆ 11ಕೆವಿ ಲೈನ್ ವಿಸ್ತರಣೆ ಮಾಡಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದರು. ಹಾಗೂ ಅನಧಿಕೃತ ರೈತರ ಐಪಿ ಸೆಟ್‌ಗಳನ್ನು ತೆರವುಗೊಳಿಸಲು ಸೂಚಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ತಿಮ್ಮೇಗೌಡ, ನವಿಲೆ ಗ್ರಾಮ</td></tr>
<tr><td>14</td><td>ಗ್ರಾಮದ 25 ಕೆವಿಎ ಪರಿವರ್ತಕ ಹೆಚ್ಚುವರಿ ಭಾರ & ಒತ್ತಡದಿಂದ ಕೂಡಿದ್ದು ಸರಿಯಾದ ವಿದ್ಯುತ್ ಸಂಪರ್ಕವಿಲ್ಲ. ದಯಮಾಡಿ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರುರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರುರವರಿಗೆ ತಿಳಿಸಿ Enhancement ಅಂದಾಜು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದರು. ಹಾಗೂ ಶಾಖಾಧಿಕಾರಿ ಶ್ರೀ ಶಿವರಾಜ್‌ಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದರು.</td></tr>
</table>

| | | |
|---|---|---|
| **ಗ್ರಾಹಕರು- ಶ್ರೀ ದೊಡ್ಡತಮ್ಮಯ್ಯ, ಚುಂಚಗಳ್ಳಿ ಗ್ರಾಮ 9945871236** | | |
| 15 | ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಮೂಲಭೂತ ಸೌಕರ್ಯಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರು ಮಾಡಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜ್ಯೇಷ್ಠತಾ ಪಟ್ಟಿಯಾನುಸಾರ ಎಲ್ಲಾ ಗ್ರಾಹಕರಿಗೂ ಆರ್‌ಯುಐಪಿ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು ಗ್ರಾಹಕರು ಭಯ ಪಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು. |
| **ಗ್ರಾಹಕರು- ಶಂಕರೇಗೌಡ, ಯರಗನಹಳ್ಳಿ ಗ್ರಾಮ** | | |
| 16 | ಗ್ರಾಮದ ಮಧ್ಯೆ ಸುಮಾರು ಕಡೆ ವಿದ್ಯುತ್ ಲೈನ್ ಜೋತು ಬಿದ್ದಿದೆ. ಮಧ್ಯಂತರ ಕಂಬ ಅಳವಡಿಸಿಕೊಡಿ ಎಂದು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಎಲ್ಲಾ ಶಾಖಾಧಿಕಾರಿಗಳಿಗೂ ವಿದ್ಯುತ್ ಲೈನ್ ಜೋತು ಬಿದ್ದಿರುವ ಕಡೆ ಮಧ್ಯಂತರ ಕಂಬ ಅಳವಡಿಸಿ ನಿರಂತರ ವಿದ್ಯುತ್ ಕೊಡಲು ನೀವುಗಳು ಗಮನ ಹರಿಸಬೇಕು ಎಂದು ತಿಳಿಸಿದರು. |
| **ಗ್ರಾಹಕರು- ಮರೀಗೌಡ, ಬನ್ನಳ್ಳಿ ಗ್ರಾಮ** | | |
| 17 | ಗ್ರಾಮದ ಐಪಿ ಲಿಮಿಟ್‌ನ 25 ಕೆವಿಎ ಪರಿವರ್ತಕ ವಿಫಲ ಗೊಂಡಿದೆ. ದಯಮಾಡಿ ಕೊಡಿಸಿಕೊಡಿ ಎಂದು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು 25 ಕೆವಿಎ ಪರಿವರ್ತಕ ಉಗ್ರಾಣದಲ್ಲಿ ಲಭ್ಯವಿಲ್ಲ. ಜೇಷ್ಠತಾ ಪಟ್ಟಿಯನುಸಾರ ವಿಫಲ ಪರಿವರ್ತಕಗಳನ್ನು ಜರೂರಾಗಿ ಕೊಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. |
| **ಗ್ರಾಹಕರು- ನ ಲ ಕೃಷ್ಣ, ನಗರಕೆರೆ ಗ್ರಾಮ 9242834721** | | |
| 18 | ಗ್ರಾಹಕರ ದೂರುಗಳಿಗೆ ಸಂಬಂಧಿಸಿದಂತೆ ದೂರು ಸಂಬಂಧಿತ ಗ್ರಾಹಕರಿಗೆ ನಿಗಮದಿಂದ ತೆಗೆದುಕೊಂಡ ಕ್ರಮದ ಬಗ್ಗೆ ಅವರ ವಿಳಾಸಕ್ಕೆ ಅಂಚೆ ಮೂಲಕ ಪತ್ರ ರವಾನಿಸುವ ಕ್ರಮ ಕೈಗೊಳ್ಳುವಂತೆ ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ದಿನಗಳಲ್ಲಿ ದೂರು ಸಂಬಂಧಿತ ಗ್ರಾಹಕರಿಗೆ ನಿಗಮದಿಂದ ತೆಗೆದುಕೊಂಡ ಕ್ರಮದ ಬಗ್ಗೆ ಅವರ ವಿಳಾಸಕ್ಕೆ ಪತ್ರ ತಲುಪಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯಲ್ಲಿದ್ದ ಕಿರಿಯ ಇಂಜಿನಿಯರ್(ವಿ)/ಸಹಾಯಕ ಇಂಜಿನಿಯರ್(ವಿ)ರವರುಗಳಿಗೆ ಪರಿವರ್ತಕಗಳು ವಿಫಲಗೊಳ್ಳದಂತೆ ಆದಷ್ಟು ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಲು ತಿಳಿಸಿದರು. ಅಲ್ಲದೇ ವಿಫಲ ಪರಿವರ್ತಕಗಳನ್ನು ಜೇಷ್ಠತಾ ಪಟ್ಟಿಯಾನುಸಾರ ನೀಡಲಾಗುತ್ತಿದ್ದು, ಪರಿವರ್ತಕಗಳ ವಿಫಲತೆ, ಒತ್ತಡ & ಭಾರವನ್ನ ತಗ್ಗಿಸಲು ವಿವಿಧ ಯೋಜನೆಯಡಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. ವಿಫಲ ಪರಿವರ್ತಕಗಳ ರಿಪೇರಿ ಕೇಂದ್ರ ಮಂಡ್ಯದಲ್ಲಿ ಮಾತ್ರವೇ ಇದ್ದು ಪರಿವರ್ತಕಗಳನ್ನು ಜರೂರಾಗಿ ರಿಪೇರಿ ಮಾಡಿ ಕೊಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಪರಿವರ್ತಕಗಳ ರಿಪೇರಿ ಕೇಂದ್ರವನ್ನು ಮದ್ದೂರು ಹಾಗೂ ಮಳವಳ್ಳಿಗಳಲ್ಲಿ ಸ್ಥಾಪಿಸುವುದಲ್ಲದೇ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ವಿಫಲ ಪರಿವರ್ತಕ ರಿಪೇರಿ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು. ಮುಂದುವರೆದು ಶಾಖಾ ಕಛೇರಿ ವ್ಯಾಪ್ತಿಯಲ್ಲಿನ ಸಮಸ್ಯೆಗಳನ್ನು ಅಲ್ಲೇ ಬಗೆಹರಿಸಿದಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳಿಗೆ ರೈತರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿಗಳಿಗೆ ಬರುವ ಅವಶ್ಯಕತೆಯೇ ಇರುವುದಿಲ್ಲ ಎಂದು ತಿಳಿಸಿದರು.

4

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಇನ್ನೂ ಕೆಲವು ಕಡೆ ಕುಡಿಯುವ ನೀರು ಸ್ಥಾವರಗಳಿಗೆ ಪ್ರತ್ಯೇಕ ಪರಿವರ್ತಕ ಅಳವಡಿಸದೇ ಇದ್ದು, ಗ್ರಾಮದ ಪರಿವರ್ತಕಗಳಿಂದಲೇ ಕುಡಿಯುವ ನೀರು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವಿರುವುದು ಕಂಡುಬರುತ್ತಿದೆ. ಅವುಗಳಿಗೆ ಪ್ರತ್ಯೇಕ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಶಾಖಾಧಿಕಾರಿಗಳಿಗೆ/ಸಹಾಯಕ ಇಂಜಿನಿಯರ್(ವಿ)ಗಳಿಗೆ ಸೂಚಿಸಿದರು. ಗ್ರಾಹಕರ ದೂರವಾಣಿ ಕರೆಗಳನ್ನ ಸ್ವೀಕರಿಸಿ, ಅವರ ಸಮಸ್ಯೆಗಳಿಗೆ ಸ್ಪಂಧಿಸಬೇಕು ಎಂದು ತಿಳಿಸಿದರು. **ಮುಂದುವರೆದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ರೈತರು ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಛೇರಿಗೆ ಬರಬೇಕಾಗಿಲ್ಲ. ನಿಮ್ಮ ವ್ಯಾಪ್ತಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಮುಖಾಂತರವೇ ಸಮಸ್ಯೆ ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು. ಮುಖ್ಯವಾಗಿ ಕೆ.ಹೊನ್ನಲಗೆರೆ ಶಾಖೆಯ ಬಿ.ಗುಡ್ಡೆ ಫೀಡರ್ ಅಧಿಕ ಭಾರ & ಒತ್ತಡದಿಂದ ಕೂಡಿದ್ದು ಅದನ್ನು ನಿವಾರಿಸಿ ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ನೀಡಲು ಲಿಂಕ್ ಲೈನ್ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.**

ಕೊನೆಯದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು, ಉಪವಿಭಾಗ-1ರವರು ಗ್ರಾಹಕರನ್ನ/ರೈತರನ್ನ ಉದ್ದೇಶಿಸಿ ಮಾತನಾಡುತ್ತಾ ಗ್ರಾಹಕರಾದ ನಿಮ್ಮಲ್ಲೂ ಸಂಘಟನೆ ಇರಬೇಕು. ಎಲ್ಲಿಯವರೆವಿಗೂ ರೈತರಲ್ಲಿ ಸಂಘಟನೆ ಇರುತ್ತದೆಯೋ ಅಲ್ಲಿಯವರೆವಿಗೂ ಸಮಸ್ಯೆ ಬಗೆಹರಿಸಬಹುದು. ರೈತರ ಜೊತೆಗೂಡಿ ನಾವು-ನೀವುಗಳು ಕಾರ್ಯನಿರ್ವಹಿಸೋಣ ಎಂದು ತಿಳಿಸುತ್ತಾ ಪತ್ರಿಕಾ ಮಾಧ್ಯಮದವರಿಗೆ ಹಾಗೂ ಗ್ರಾಹಕರಿಗೆ ವಂದಿಸಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 2.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು**

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜನಿಯರ್(ವಿ), ಚಾವಿಸಸಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ..
5) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
7) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
8) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ